ಹೊರತುಪಡಿಸಿ ಮಾನಸಿಕ ಅವಲಂಬನೆಗಾಗಿ ತಾನು ಅನ್ಯನೊಬ್ಬನ ಸಹಾನುಭೂತಿ ಬಯಸುತ್ತಿದ್ದೆನಾ? ಇಂತಹ ಏನೇನೋ ಗೋಜಲಿನೊಳಗೆ ಸಿಕ್ಕಿಕೊಂಡು ಕೆಲ ಕಾಲ ಭಾಮ ಮಾನಸಿಕ ಯಾತನೆ ಅನುಭವಿಸಿದ್ದು ಹೌದು. ತನ್ನಪ್ಪನನ್ನು ಪುರುಷಶ್ರೇಷ್ಠರ ಸಾಲಿನಲ್ಲಿ ಕಲ್ಪಿಸಿಕೊಂಡು ಆರಾಧನಾಭಾವ ಬೆಳೆಸಿಕೊಂಡಿದ್ದವಳಿಗೆ ಅನಿರೀಕ್ಷಿತವಾದ ಸತ್ಯ ಕಂಗೆಡಿಸಿತ್ತು.

ಅಪ್ಪನೊಂದಿಗೆ ಮುಖಾಮುಖಿಯಾಗಿ ನಿಂತು ಜಗಳ ಕಾಯುವಷ್ಟು ಧೈರ್ಯವಿಲ್ಲ. ಅಲ್ಲದೆ ಕಣ್ಣಾರೆ ಕಂಡ ಸಾಕ್ಷ್ಯಗಳನ್ನೂ ನಂಬಲು ನಿರಾಕರಿಸುವ ಅಯೋಮಯ ಪರಿಸ್ಥಿತಿ. ತನಗಿಂತ ಹೆಚ್ಚು ಆಘಾತ ಅನುಭವಿಸುತ್ತಿದ್ದ ವೆಂಕಟೇಶನೊಡನೆ ಬೆಸೆದುಕೊಂಡಿತ್ತು ಸಂಬಂಧ. ಅದು ಯಾವುದೋ ಗಳಿಗೆಯ ದೌರ್ಬಲ್ಯ ಎಂದು ಈಗ ಅನಿಸುವುದಿಲ್ಲ ಭಾಮನಿಗೆ. ಆದದ್ದೆಲ್ಲಾ ಒಳಿತಿಗೇ ಆಗಿತ್ತು. ತನ್ನ ಕೃತ್ಯದ ಮೂಲಕ ಅಪ್ಪನನ್ನು ದಂಡಿಸಬೇಕೆಂಬ ವಿಚಾರ ಸುಪ್ತಪ್ರಜ್ಞೆಯಲ್ಲಿ ಕೆಲಸ ಮಾಡುತ್ತಿದ್ದಿರಬಹುದಾದರೂ ಅದನ್ನೀಗ ಒಪ್ಪಿಕೊಳ್ಳಲು ನಿರಾಕರಿಸುತ್ತಿದೆ ಅಂತರಂಗ. ಏನೋ ಒಂದು. ನಡೆದು ಹೋಗಿದ್ದಕ್ಕೆ ಇಂಥದೇ ನಿಖರ ಕಾರಣ ಎಂದು ಹಣೆಪಟ್ಟಿ ಹಚ್ಚಬೇಕೆಂದು ಅವಳಿಗೇನು ಹಟವಿಲ್ಲ. ಆದರೆ ಭಾರ್ಗವನೊಡನೆ ಹೇಳಿಕೊಂಡಂತೆ ಮತ್ತೊಂದು ವಿಚಾರದಲ್ಲಿ ಹಟ ಇತ್ತು. ಅಪ್ಪನ ಎದುರು ತಲೆಯೆತ್ತಿ ನಿಲ್ಲಬೇಕೆಂಬ ಹಟ. ತಾನು ಮೆಚ್ಚಿದವನೊಡನೆ ಒಳ್ಳೆಯ ಬಾಳು ಬಾಳುತ್ತಿದ್ದೇನೆಂದು ಸಾಧಿಸಿ ತೋರಿಸುವ ಹಟ. ಜೀವನದ ದಾರಿಯಲ್ಲಿ ಎದುರಾದ ಮುಳ್ಳುಗಳನ್ನು ನಿವಾರಿಸಿಕೊಂಡು ತಮ್ಮ ದಾರಿಯನ್ನು ನೇರ್ಪಡಿಸಿಕೊಂಡಿದ್ದರು ದಂಪತಿ.

ಎಲ್ಲಾ ಸುಗಮವಾಗಿ ಬದುಕು ಒಂದು ನಿಶ್ಚಿಂತ ನೆಲೆಗೆ ತಲುಪಿದ ಮೇಲೆ ಅಪ್ಪನೊಡನೆ ಸಂಪರ್ಕ ಸಾಧಿಸಬೇಕೆಂಬ ಆಸೆಯ ಕಿಡಿ ಹತ್ತಿಕೊಂಡಿತ್ತು. ಕಿಡಿಯಾಗಿ ಹುಟ್ಟಿದ್ದು ಕ್ರಮೇಣ ಉರಿವ ಕೆಂಡವಾಗಿ, ನಿಗಿನಿಗಿಸುವ ಜ್ವಾಲೆಯಾಗಿ, ಪತ್ರಸಂದೇಶ ನಿಷ್ಫಲವಾಗಿತ್ತು. ಭಾಮನ ಮನಸಿನ ವ್ಯಗ್ರತೆಯನ್ನು ಹೆಚ್ಚು ಮಾಡಿತ್ತು. ವೆಂಕಟೇಶ ಈ ತಳಮಳವನ್ನು ಗುರ್ತಿಸಿದ್ದ.

'ಬೇಕಾದ್ರೆ ಒಂದ್ಸಲ ಹೋಗ್ಬರೋಣ. ನೀನು ಮನಸ್ಸಲ್ಲೇ ಕೊರಗ್ತಿರ್ಬೇಡ' ಅಂದಿದ್ದ.

'ಬೇಡ ಕಣೋ. ಆಸ್ತಿಗೆ ಬಾಯಿ ಕಳ್ಕೊಂಡು ಇಷ್ಟು ವರ್ಷ ಆದ ಮೇಲೆ ಬರ್ತಿದಾಳೆ ಅಂತ ಯಾರೂ ಅಂದ್ಕೊಳ್ಳೋ ಹಾಗಾಗ್ಬಾರ್ದು. ಅಪ್ಪ ನನ್ನ ಕಾಗದಕ್ಕೆ ಬೆಲೆ ಕೊಟ್ಟು ತಾನಾಗಿ ಬಾ ಅಂದಿದ್ರೆ ಅದು ಬೇರೆ ಮಾತು'.

'ಯಾರಿಗೆ ಬೇಕು ಅವರ ಆಸ್ತಿ? ಅವರಾಗಿ ಕೊಟ್ರೂ ನಮಗೆ ಬೇಡ ಕಣೇ. ದೇವರು ನಮಗೆ ಬೇಕಾದಷ್ಟು ಕೊಟ್ಟಿದಾನೆ. ಎಲ್ಲಕ್ಕಿಂತ ದೊಡ್ಡ ಆಸ್ತೀನೇ ಕೊಟ್ಟಿದಾನೆ'

'ಅಂದ್ರೆ?'

'ನಿನಗಿಂತ ದೊಡ್ಡ ಆಸ್ತಿ ಬೇಕಾ?' ವೆಂಕಟೇಶನ ಇಂತಹ ಮಾತುಗಳು ಅವಳನ್ನು ಸಮಾಧಾನಗೊಳಿಸುತ್ತಿದ್ದುವು ಅಂದರೆ ಉತ್ಪ್ರೇಕ್ಷೆಯಲ್ಲ. ಬದುಕು ಅಂದರೆ ನಿರೀಕ್ಷೆಗೆ ಮೀರಿದ್ದು ಅನ್ನುವುದನ್ನು ಸಾಬೀತುಗೊಳಿಸಿತ್ತು ಮುಂದಿನ ಬೆಳವಣಿಗೆ. ಭಾಮನ ಪ್ರೀತಿಯ ಅಪ್ಪ ಅವಳ ನೆರಳಿಗೆ ಬಂದು ಸೇರಿಕೊಂಡಿದ್ದರು. ಒಂದು ಕಾಲದಲ್ಲಿ ಅಕ್ಷಮ್ಯ ಅಪರಾಧ ಅನ್ನಿಸಿದ್ದ ಅಪ್ಪನ ಕುಟುಂಬದಾಚೆಯ ಸಂಬಂಧ, ಒಂದೊಮ್ಮೆ ಅದು ಇದ್ದಿದ್ದೇ ಹೌದಾಗಿದ್ದರೆ, ಈಗ ಜೀವನಪಥದಲ್ಲಿನ ಒಂದು ಸಾಮಾನ್ಯ ಸಂಗತಿ ಅನಿಸತೊಡಗಿತ್ತು ಭಾಮನಿಗೆ. ಹೆಂಡತಿಯಿದ್ದೂ ಪರಸತಿಯ ಸಂಗಕ್ಕೆಳಸಲಿಲ್ಲ ಅಪ್ಪ. ಹೊಟ್ಟೆಯ ಹಸಿವಿನಂತೆ ದೇಹದ ಹಸಿವೂ ಕ್ಷೋಭೆಗೊಳಿಸುತ್ತಿರಬಹುದಾದ ವಯಸ್ಸಿನಲ್ಲಿ ತನ್ನ ಪರಿಧಿಯಲ್ಲಿ ಅವರು ಸುಖ ಹುಡುಕಿಕೊಂಡರೆ ಅದು ತಪ್ಪೇ? ಒಂದು ಕಾಲದಲ್ಲಿ, ಒಂದು ವಯಸ್ಸಿನಲ್ಲಿ, ಒಂದು ಸನ್ನಿವೇಶದಲ್ಲಿ ತಪ್ಪಾಗಿ ಕಂಡಿದ್ದ ಅಪ್ಪನ ನಡವಳಿಕೆಯ ಕುರಿತಾದ ಅಸಹನೆಯನ್ನು ಕಾಲ ಹಾಗೂ ಅನುಭವ ಕ್ಷಮಾರ್ಹವಾಗಿಸಿದ್ದುವು. ಒಂದು ಕಾಲದ ತಪ್ಪು ಸದಾ ಕಾಲಕ್ಕೂ ತಪ್ಪೆಂದೇ ಅನಿಸಬೇಕಾಗಿಲ್ಲ ಅನ್ನುತ್ತಿತ್ತು ಮಾಗಿದ ಚಿತ್ತ. ಕ್ಷಮಿಸಲಾಗದ ತಪ್ಪು ಯಾವುದೂ ಇರುವುದಿಲ್ಲ. ಅದನ್ನು ಅರಿತುಕೊಳ್ಳಬಹುದಾಗಿತ್ತು ಅಪ್ಪನೂ. ಅವನ ಅಭಿಪ್ರಾಯ ಏನೇ ಇರಲಿ, ಅವನು ತನ್ನ ಅಪ್ಪ. ಚಿಕ್ಕಮಕ್ಕಳನ್ನು ಪ್ರೀತಿಯಿಂದ ಎದೆಗಪ್ಪಿಕೊಂಡು ಬೆಳೆಸಿದವನು. ಮಕ್ಕಳ ನಗುವಿನಲ್ಲಿ ತನ್ನ ಸಂತೋಷ ಕಾಣುತ್ತಿದ್ದವನು. ಅಪ್ಪನ ಪ್ರೀತಿ, ಒಡನಾಟ, ಒಳ್ಳೆಯತನಗಳೆಲ್ಲಾ ಭೂತಗನ್ನಡಿಯಲ್ಲಿ ನೋಡಿದಂತೆ ಒಂದಕ್ಕೆ ಹತ್ತು ಪಟ್ಟು ದೊಡ್ಡದಾಗಿ ಕಾಣತೊಡಗಿ ಅವನ ವಿಷಯದಲ್ಲಿ ಭಾವುಕಳಾಗುತ್ತಿದ್ದಳು ಭಾಮ.

ಇನ್ನೆಷ್ಟು ವರ್ಷ ಬದುಕಿಯಾನು ಅಪ್ಪ? ಅವನು ಬದುಕಿರುವವರೆಗೆ ಅವನು ತನ್ನ ಮಗು. ಅವನ ಋಣ ತನ್ನ ಮೇಲಿದೆ. ಒಮ್ಮೆ ಕಳೆದುಕೊಂಡವನನ್ನು ಮತ್ತೆಂದೂ ಕಳೆದುಕೊಳ್ಳಲಾರೆ ಎಂದು ನಿರ್ಧರಿಸಿಬಿಟ್ಟಿದ್ದಾಳೆ ಭಾಮ. ಇಷ್ಟಕ್ಕೂ ಮನುಷ್ಯಮಾತ್ರರಿಗೆ ಬೇಕಾಗಿರುವುದೇನು? ಒಂದು ಹಿಡಿ ಪ್ರೀತಿ. ಅನ್ನಕ್ಕಿಂತ ಮಿಗಿಲಾದ ಶಕ್ತಿಯಿರುವ ಪ್ರೀತಿ. ಎಷ್ಟೋ ನಿರ್ಭಾಗ್ಯರಿಗೆ ಇದು ದಕ್ಕುವುದೇ ಇಲ್ಲ ಎನ್ನುವುದು ಜೀವನದ ವಿಪರ್ಯಾಸ. ಹೆತ್ತವರಿದ್ದೂ ದಕ್ಕದಿರಬಹುದು. ಸಂಗಾತಿಯಿದ್ದೂ ಸಿಗದಿರಬಹುದು. ಹಣವಿದ್ದೂ ಮರೀಚಿಕೆಯಾಗಬಹುದು. ಗುಡಿಸಲಲ್ಲಿ ವಿಜೃಂಭಿಸಬಹುದು. ಅಪ್ಪನಿಗೆ ತನ್ನ ಪ್ರೀತಿ ಅರ್ಥವಾಗುವ ಸಾಧ್ಯತೆ ಇಲ್ಲದಿದ್ದರೇನಂತೆ? ಹಾಗೆ ಅರ್ಥವಾಗುವುದಿಲ್ಲ ಅಂದುಕೊಳ್ಳುವುದೂ ತನ್ನ ಸೀಮಿತ ತಿಳಿವಳಿಕೆ ಇರಬಹುದು.

ಆಗಿನ್ನೂ ಹುಟ್ಟಿದ ಹಸುಗೂಸು, ಮೂಕಪ್ರಾಣಿಗಳೂ ಸಹ ಪ್ರೀತಿಯ ಅಮೃತಸ್ಪರ್ಶಕ್ಕೆ ಸ್ಪಂದಿಸುವಾಗ ಅಪ್ಪನ ಅಂತರ್ಯಕ್ಕೂ ಇದು ತಟ್ಟಬಹುದು. ತಟ್ಟಲಿ, ತಟ್ಟದಿರಲಿ ತನ್ನ ನಿರ್ವ್ಯಾಜ ಪ್ರೀತಿಯಿಂದ ಅವನನ್ನು ಕಾಪಾಡಿಕೊಳ್ಳುತ್ತೇನೆ ಎಂದುಕೊಳ್ಳುತ್ತಾ ಸಾರ್ಥಕಭಾವ ಅನುಭವಿಸುತ್ತಿದ್ದಳು ಸತ್ಯಭಾಮ.

ಧಾತನೆಣ್ಣೆಯಗಾಣದೆಳ್ಳುಕಾಳಲೆ ನೀನು
ಆತನೆಲ್ಲರನರೆವನ್, ಆರನುಂ ಬಿಡನು
ಆತುರಂಗೊಳದೆ ವಿಸ್ಮೃತಿಬಡದುಪೇಕ್ಷಿಸದೆ
ಘಾತಿಸುವನೆಲ್ಲರನು– ಮಂಕುತಿಮ್ಮ

(ಮುಗಿಯಿತು)

ಪ್ರತಿಕ್ರಿಯಿಸಿ: feedback@sudha.co.in




## ಹೊಸ ಧಾರಾವಾಹಿ

## ಮುಂದಿನವಾರ ಆರಂಭ

## ಬುದ್ಧಯಾನಕ್ಕೆ ಸ್ವಾಗತ

ಅರ್ಥಪೂರ್ಣ ಹಾಗೂ ಮಾನವೀಯ ಬದುಕಿಗೆ ಹಂಬಲಿಸುವವರು ಆಗಾಗ ಕೈಗೊಳ್ಳಲೇಬೇಕಾದ ಯಾನ 'ಬುದ್ಧಯಾನ'. ಇದು, ಬದುಕಿನ ಕುರಿತ ನಮ್ಮ ನಿರೀಕ್ಷೆ–ನಂಬಿಕೆಗಳನ್ನು ಸ್ಪಷ್ಟಪಡಿಸಿಕೊಳ್ಳಲು ಹಾಗೂ ಒರೆಗೆ ಹಚ್ಚಲು ಅವಕಾಶ ಕಲ್ಪಿಸುವ ಪಯಣ. ಬುದ್ಧಯಾನವನ್ನು ಬೌದ್ಧ ತಾತ್ವಿಕತೆಯ ಮುಖಾಮುಖಿ ರೂಪದಲ್ಲಷ್ಟೇ ನೋಡಬೇಕಿಲ್ಲ. ಸಿದ್ಧಾರ್ಥ ಗೌತಮನಾದ ಜೀವನವನ್ನು ಅರಿಯುವುದೂ ಬುದ್ಧಯಾನವೇ. ಬುದ್ಧನ ಕಥೆ ಬಾಲ್ಯದಿಂದಲೇ ನಮ್ಮ ಭಾವಕೋಶವನ್ನು ಪ್ರವೇಶಿಸಿದರೂ, ರಾಮಾಯಣ–ಮಹಾಭಾರತಗಳಂತೆ ಪ್ರತಿ ಮುಖಾಮುಖಿಯಲ್ಲೂ ಬುದ್ಧ ಅಚ್ಚರಿ ಹುಟ್ಟಿಸುತ್ತಾನೆ, ನಮ್ಮೊಳಗೆ ಬೆಳೆಯುತ್ತಾನೆ, ಬೆಳಕಾಗಿ ಪರಿಣಮಿಸುತ್ತಾನೆ. ಇಂಥದೊಂದು ಬೆಳಕಿನ ಪಯಣ– ಪ್ರಸಿದ್ಧ ಕಾದಂಬರಿಕಾರ **ಕಂನಾಡಿಗಾ ನಾರಾಯಣ** ಅವರ 'ಬುದ್ಧಯಾನ'– ಮುಂದಿನ ಸಂಚಿಕೆಯಿಂದ 'ಸುಧಾ'ದಲ್ಲಿ ಧಾರಾವಾಹಿಯಾಗಿ ಪ್ರಕಟಗೊಳ್ಳುತ್ತಿದೆ.